ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೩ನೇ ಜನವರಿ ೧೯೮೬ ಮಾಘ ೩, ೧೯೦೭ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್ ರವರು) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ರಾಜ್ಯದಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳ ಸ್ಥಾಪನೆಯ ಬಗ್ಗೆ

೩೭. ಶ್ರೀ ಜಿ. ರಾಜಂಗೌಡ (ಹನೂರು).- ವಾಣಿಜ್ಯ ರೇಷ್ಮೆ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ?

ಆ) ಇದುವರೆವಿಗೂ ಒಂದೊಂದು ಕೇಂದ್ರದಲ್ಲೂ ಎಷ್ಟೆಷ್ಟು ವಹಿವಾಟು ನಡೆದಿದೆ ಮತ್ತು ಕಮೀಷನ್ ಎಷ್ಟು?

ಇ) ಹಾಗಿದ್ದಲ್ಲಿ ಗಳಿಸಿರುವ ಕಮೀಷನ್‌ನ್ನು ಇದುವರೆವಿಗೂ ಯಾವ ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಉಪಯೋಗಿಸಲಾಗಿದೆ?

ಈ) ಇವುಗಳ ಅಸ್ತಿತ್ವಕ್ಕೆ ಬಂದ ಮೇಲೆ ರೇಷ್ಮೆ ಉದ್ಯಮದಲ್ಲಿ ತೊಡಗಿರುವ ಯಾರು ಯಾರಿಗೆ ಯಾವ ಹಂತದಲ್ಲಿ ಪ್ರಯೋಜನವಾಗಿದೆ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ಈ ಕೆಳಕಂಡ ಸ್ಥಳಗಳಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.—

ಬೆಂಗಳೂರು ಜಿಲ್ಲೆಯಲ್ಲಿ ಬೆಂಗಳೂರು ಮತ್ತು ರಾಮನಗರ.

ಕೋಲಾರ ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟ.

ಮೈಸೂರು ಜಿಲ್ಲೆಯಲ್ಲಿ ಕೊಳ್ಳೇಗಾಲ.

ಆ) ಕಮೀಷನ್ನು ವಸೂಲಿ ಮಾಡಲಾಗುತ್ತಿಲ್ಲ. ಆದರೆ ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ. ಪ್ರತಿಯೊಂದು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಅವು ಪ್ರಾರಂಭವಾದಂದಿನಿಂದ ಡಿಸೆಂಬರ್ ೮೫ರ ಅಂತ್ಯದವರೆಗೆ ವಹಿವಾಟು ಆಗಿರುವ ರೇಷ್ಮೆಯ ಪರಿಮಾಣ, ಅದರ ಮೌಲ್ಯ ಮತ್ತು ಗಳಿಸಿರುವ ಮಾರು ಕಟ್ಟೆಯ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.—

ಕ್ರಮ ಸಂಖ್ಯೆ	ವಿನಿಮಯ ಕೇಂದ್ರ	ವಹಿವಾಟು ಆದರೆ ರೇಷ್ಮೆಯ ಪರಿಮಾಣ (ಮೆ. ಟನ್ನುಗಳಲ್ಲಿ)	ಮೌಲ್ಯ	ಮಾರುಕಟ್ಟೆ ಶುಲ್ಕ (ಲಕ್ಷ ರೂ.ಗಳಲ್ಲಿ)
೧.	ಬೆಂಗಳೂರು	೧೨,೭೯೧	೪೭,೯೧೮.೦೦೦	೭೬೧.೮೨೧
೨.	ಕೊಳ್ಳೇಗಾಲ	೪೬೭	೧,೮೭೨.೦೦೦	೨೮.೦೭೯
೩.	ರಾಮನಗರ	೩೯೫	೧,೭೨೯.೦೦೦	೨೩.೧೪೮
೪.	ಚಿಕ್ಕಬಳ್ಳಾಪುರ	೧೮೨	೭೧೨.೦೦೦	೧೧.೦೯೪
೫.	ಶಿಡ್ಲಘಟ್ಟ	೪೫	೨೧೯.೦೦೦	೨,೧೯೩
	ಒಟ್ಟು	೧೩,೮೮೦	೫೨.೪೩೦.೦೦೦	೮೭೬.೩೩೫

೩) ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಗಳಿಸಿರುವ ಮಾರುಕಟ್ಟೆ ಶುಲ್ಕವನ್ನು ಬೆಲೆ ಸ್ಥಿರೀಕರಣ ನಿಧಿಗೆ ಜಮಾ ಮಾಡಿ ಈ ಕೆಳಕಂಡ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ.

೧) ರೇಷ್ಮೆ ನೂಲು ಬಿಚ್ಚುವವರು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಸೂಕ್ತ ಬೆಲೆಗೆ ಮಾರಾಟವಾಗದೆ ರೇಷ್ಮೆಯನ್ನು ಒತ್ತೆ ಇಟ್ಟಲ್ಲಿ ಶೇ. ೬ ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಈ ಪ್ರಾಧಿಕಾರದ ನಿಧಿಯಿಂದ ಭರಿಸಲಾಗುತ್ತಿದೆ ಡಿಸೆಂಬರ್ ೮೬ರ ಅಂತ್ಯದವರೆಗೆ ಈ ಕಾರ್ಯಕ್ರಮದಲ್ಲಿ ಸುಮಾರು ರೂ. ೩೭.೭೮೨–೦೦ ಖರ್ಚಾಗಿವೆ.

೨) ರೀಲರ್ಸ್ ಕೊ. ಆಪರೇಟೀವ್ ಸೊಸೈಟಿಗಳಿಂದ ರೇಷ್ಮೆ ನೂಲು ಬಿಚ್ಚುವವರು ಪಡೆದಿರುವ ಸಾಲದ ಮೇಲೆ ಸಾಲ ಮತ್ತು ಅದರ ಬಡ್ಡಿಯನ್ನು ಹಿಂತಿರುಗಿಸುವಾಗ ಬಡ್ಡಿಯಲ್ಲಿ ಶೇ. ೫೦ರಷ್ಟು ಬಡ್ಡಿ ಸಹಾಯ ರೂಪದಲ್ಲಿ ಈ ಪ್ರಾಧಿಕಾರದ ನಿಧಿಯಿಂದ ಭರಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ರೂ. ೧೦ ೬೯,೭೬೪–೦೦ ಖರ್ಚಾಗಿದೆ.

೩) ರೇಷ್ಮೆ ನೂಲು ಬಿಚ್ಚುವವರ ಸಹಕಾರ ಸಂಘಗಳಿಗೆ ಮೂಲಧನ ಶೇ.೨೫ ರಷ್ಟನ್ನು ಸಹಾಯ ಧನದ ರೂಪದಲ್ಲಿ ಮತ್ತು ಸಂಪೂರ್ಣ ಸಂಸ್ಥಿ ಬಡ್ಡಿಯನ್ನು ಈ ನಿಧಿಯಿಂದ ನೀಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಡಿಸೆಂಬರ್ ೮೫ರ ಅಂತ್ಯದ ವರೆಗೆ ರೂ. ೪,೯೯,೮೮೭–೦೦ ಖರ್ಚಾಗಿದೆ.

೪) ಹೊಸ ಪ್ರದೇಶದಲ್ಲಿನ ನೂಲು ಬಿಚ್ಚುವವರು ಕೆಲವು ತೊಂದರೆಗಳಿಂದಾಗಿ ಉತ್ತಮ ಮಟ್ಟದ ರೇಷ್ಮೆ ದಾರವನ್ನು ತೆಗೆಯಲು ಸಾಧ್ಯವಾಗುವುದಿಲ್ಲ. ರೇಷ್ಮೆ ನೂಲು ಪೂರಾಂವಲ್ಲಿ ಇವರು ನಷ್ಟವನ್ನು ಅನುಭವಿಸಬೇಕಾಗಿರುತ್ತದೆ. ಇದನ್ನು ಸ್ವಲ್ಪ ಮಟ್ಟಿಗೆ ನಿವಾರಿಸಲು ಅವರಿಗೆ ೧ ಕೆ.ಜಿ. ಮಿಶ್ರತಳಿ ಗೂಡಿನ ರೇಷ್ಮೆಗೆ ರೂ. ೧೦–೦೦ ಸಹಾಯ ಧನವಾಗಿ ನೀಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಡಿಸೆಂಬರ್ ೮೫ರ ಅಂತ್ಯದವರೆಗೆ ರೂ. ೪೫,೬೫೦–೦೦ ಖರ್ಚಾಗಿವೆ.

೫) ಬೆಂಗಳೂರು ರೇಷ್ಮೆ ವಿನಿಮಯ ಕೇಂದ್ರಕ್ಕೆ ತರುವ ನೂಲು ಬಿಚ್ಚುವವರಿಗೆ ಬಸ್ ನಿಲ್ದಾಣ ಗಳಿಂದ ರೇಷ್ಮೆ ವಿನಿಮಯ ಕೇಂದ್ರಕ್ಕೆ ಉಚಿತವಾಗಿ ವಾಹನಗಳನ್ನು ಸೌಕರ್ಯ ಒದಗಿಸಲಾಗುತ್ತಿದೆ. ಇದಕ್ಕಾಗಿ ವಾಹನಗಳನ್ನು ಖರೀದಿಸಲು ರೂ. ೪,೮೩,೪೧೫–೦೦ ವೆಚ್ಚ ಮಾಡಲಾಗಿದೆ.

೬) ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಒತ್ತೆ ಇಟ್ಟಿರುವ ರೇಷ್ಮೆಗೆ ವಿಮಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಡಿಸೆಂಬರ್ ೮೫ರ ಅಂತ್ಯದವರೆಗೆ ರೂ. ೩೨,೧೫೪–೦೦ ಖರ್ಚಾಗಿವೆ.

೪) ೭) ಕಂಪ್ಯೂಟರ್ ಕೊಳ್ಳಲು ರೂ. ೧,೩೧,೫೦೮–೦೦ ಖರ್ಚು ಮಾಡಲಾಗಿದೆ.

೮) ರೇಷ್ಮೆ ವಿನಿಮಯಂ ಕೇಂದ್ರಗಳಲ್ಲಿ ವಿಶ್ರಾಂತಿ ಗೃಹ, ಕುಡಿಯುವ ನೀರಿನ ಸೌಲಭ್ಯ, ಫಲಹಾರ ಮಂದಿರ ಮೊದಲಾದ ಸೌಲಭ್ಯಗಳನ್ನು ಒದಗಿಸಲು ರೂ. ೧,೪೯,೨೦೯.೦೦ ಖರ್ಚು ಮಾಡಲಾಗಿದೆ.

೯) ಬೆಲೆ ಸ್ಥಿರೀಕರಣ ನಿಧಿಯ ಆಡಳಿತ ಅಸ್ತಿತ್ವಕ್ಕೆ ರೂ. ೨,೩೭,೭೪೩ ಖರ್ಚು ಮಾಡಲಾಗಿದೆ.

ಒಟ್ಟು ೨೭,೩೬,೬೧೨-೦೦ ರೂಪಾಯೀಗಳನ್ನು ಖರ್ಚು ಮಾಡಲಾಗಿದೆ.

ರೇಷ್ಮೆ ವಿನಿಮಯಂ ಕೇಂದ್ರಗಳು ಅಸ್ತಿತ್ವಕ್ಕೆ ಬಂದ ಮೇಲೆ ಮುಖ್ಯವಾಗಿ ನೂಲು ಬಿಚ್ಚುವವರಿಗೆ ಮತ್ತು ನೇಕಾರರಿಗೆ ಪ್ರಯೋಜನವಾಗಿದೆ.

ನೂಲು ಬಿಚ್ಚುವವರಿಗೆ.—ಬಹಿರಂಗ ಹರಾಜಿನ ಮೂಲಕ ಸ್ಪರ್ಧಾತ್ಮಕ ಬೆಲೆ ಸರಿಯಾದ ತೂಕ ನಗದು ಹಣಪಾವತಿ ಮತ್ತು ರೇಷ್ಮೆ ನೂಲು ಸೂಕ್ತ ಬೆಲೆಗೆ ಮಾರಾಟವಾಗದೆ ಉಳಿದಲ್ಲಿ ಒತ್ತೆ ಇಟ್ಟು ಕೊಳ್ಳುವ ಸೌಲಭ್ಯಗಳನ್ನು ಒದಗಿಸಲಾಗಿದೆ.

ನೇಕಾರರಿಗೆ.—ದಳ್ಳಾಳಿಗಳ ಕಾಟವಿಲ್ಲದೆ, ನೇಕಾರರಿಗೆ ತಮಗೆ ಬೇಕಾದ ಗಣಮಟ್ಟದ ರೇಷ್ಮೆಯನ್ನು ಸೂಕ್ತ ಬೆಲೆಯಲ್ಲಿ ಪಡೆಯಲು ಅವಕಾಶವಾಗಿದೆ,

ಶ್ರೀ ಜಿ. ರಾಜುಗೌಡ.—ಇಲ್ಲಿಯವರೆಗೆ ಮಾರುಕಟ್ಟೆ ಶುಲ್ಕವೆಂದು ಎಂಟೂಕಾಲೂ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದರೆ, ಖರ್ಚು ಮಾಡಿರುವುದು ಕೇವಲ ೨೭ ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ ಖರ್ಚು ಮಾಡಿರುವುದು ಕೇವಲ ೨೭ ಲಕ್ಷ ರೂಪಾಯಿಗಳು ಮಾತ್ರ. ಅಂದರೆ ಶೇಕಡಾ ಒಂದರಷ್ಟನ್ನು ಸಹ ಖರ್ಚು ಮಾಡಿಲ್ಲ. ಇದರಿಂದ ಈ ರಾಜ್ಯದಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳು ಏನಿವೆ, ಅವು ಮಾರ್ವಾಡಿ ಸಂಸ್ಥೆಗಳಾಗಿವೆ ಎಂದು ಜನರು ಹೇಳುತ್ತಿದ್ದಾರೆ. ಇದು ನಿಜವೇ? ಈಗ ನಮ್ಮ ರಾಜ್ಯದಲ್ಲಿರುವ ೨೭ ನೂಲು ಬಿಚ್ಚುವ ಸಹಕಾರ ಸಂಘಗಳು ಏನಿವೆ? ಅವುಗಳ ಮೂಲಕ ಈ ಶುಲ್ಕದಿಂದ ವಸೂಲಿಯಾದ ಹಣವನ್ನು ಈ ಸಹಕಾರಸಂಘಗಳ ವ್ಯಾಪ್ತಿಯಲ್ಲಿ ಇರುವ ಹರಿಜನ ಮತ್ತು ಗಿರಿಜನರಿಗೆ ಕಡಿವೆಂ ಬಡ್ಡಿ ದರದಲ್ಲಿ ಏತಕ್ಕೆ ಸಾಲ ಕೊಡಬಾರದು? ಎಲ್ಲಾ ಕಡೆಗಳಲ್ಲಿಯೂ ಬಸ್‌ಸ್ಟ್ಯಾಂಡ್ ನಿಂದ ರೇಷ್ಮೆ ವಿನಿಮಯ ಕೇಂದ್ರಗಳಿಗೆ ಜನರು ತಂದಂಥ ನೂಲನ್ನು ಸಾಗಿಸಲು ಉಚಿತವಾಗಿ ವಾಹನ ಸೌಕರ್ಯವನ್ನು ಏತಕ್ಕೆ ಏರ್ಪಡಿಸಬಾರದು? ರೇಷ್ಮೆ ಗೂಡಿಂಗಳನ್ನು ಇಡಲು ಎಲ್ಲಾ ಕಡೆ ಕಟ್ಟಡಗಳನ್ನು ಹಾಗೂ ವಿಶ್ರಾಂತಿ ಗೃಹಗಳನ್ನು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಯನ್ನು ಏತಕ್ಕೆ ಕಲ್ಪಿಸಬಾರದು? ಇಲ್ಲಿ ೭ ಮತ್ತು ೮ನೇ ಐಟಂಗಳು ಏನಿವೆ, ಇದಕ್ಕಾಗಿ ಖರ್ಚು ಮಾಡಿರುವ ಹಣದಿಂದ ಯಾರಿಗಾದರೂ ಅನುಕೂಲವಾಗಿದೆಯೇ?

ಶ್ರೀ ವೈ ಕೆ. ರಾಮಯ್ಯ.—ನಾನು ಸಾಕಷ್ಟು ಉದ್ದವಾದ ಉತ್ತರವನ್ನು ಕೊಟ್ಟಿದ್ದೇನೆ. ಮಾರುಕಟ್ಟೆ ಶುಲ್ಕದ ರೂಪದಲ್ಲಿ ವಸೂಲಿ ಮಾಡಿದ ಹಣದಿಂದ ಸಾಕಷ್ಟು ಅನುಕೂಲಗಳನ್ನು ಒದಗಿಸಿ ಕೊಟ್ಟಿಲ್ಲ ಆದರೂ ಮಾರ್ವಾಡಿಗಳ ರೀತಿ ಇದನ್ನು ವಸೂಲಿ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಬಾಬಿನಿಂದ ವಸೂಲಿಯಾದ ಹಣವನ್ನು ಸರಿಯಾಗಿ ಖರ್ಚು ಮಾಡಿಲ್ಲ ಎಂಬುದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಯಾವುಯಾವುದಕ್ಕೆ ಈ ಹಣವನ್ನು ಖರ್ಚು ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೋ, ಆ ಉದ್ದೇಶಗಳಿಗೆ ಈ ಹಣವನ್ನು ಖರ್ಚು ಮಾಡಲು ನಾವು ಸೂಕ್ತ ಕಾರ್ಯ ಕ್ರಮವನ್ನು ಕೈಕೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ.—ಈ ಮಾರುಕಟ್ಟೆ ಶುಲ್ಕವನ್ನು ಯಾವ ರೀತಿ ಖರ್ಚು ಮಾಡಬೇಕೂ ಎಂಬ ಬಗ್ಗೆ ಸಲಹೆ ನೀಡಲು ಶಾಸಕರ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡುತ್ತೀರಾ?

ಶ್ರೀ ವೈ.ಕೆ. ರಾಮಯ್ಯ.—ಇದಕ್ಕೆ ಬಹುಶಃ ನನಗೆ ತಿಳಿದಂತೆ ಶಾಸಕರ ಸಮಿತಿಯ ಅವಶ್ಯಕತೆ ಇಲ್ಲ, ಈ ಹಣವನ್ನು ಯಾವಯಾವ ಉದ್ದೇಶಗಳಿಗೆ ಖರ್ಚು ಮಾಡಬಹುದು ಎಂಬ ಬಗ್ಗೆ ಆಗಾಗಲೇ ನಮ್ಮ ಪ್ರಾಧಿಕಾರದವರು ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಮತ್ತೆ ಒಂದು ಸಮಿತಿ ನೇಮಕ ಮಾಡುವ ಉದ್ದೇಶವಿಲ್ಲ. ಎಂದು ನಾನು ಭಾವಿಸಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಈಗ ನೂಲು ಬಿಚ್ಚುವ ಸಹಕಾರಸಂಘಗಳಿಂದ ಏನು ಸಾಲ ಕೊಡಲಾಗಿದೆ, ಆ ಸಾಲವನ್ನು ಬರಗಾಲದ ಪ್ರಯುಕ್ತ ಸಾಲ ಪಡೆದವರು ತೀರಿಸುವ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಜೂನ್ ೩೧ರವರೆಗೆ ಸಾಲ ತೀರಿಸಲು ಸಮಯಾವಕಾಶವನ್ನು ವಿಸ್ತರಿಸುತ್ತೀರಾ?

ಶ್ರೀ ವೈ. ಕೆ. ರಾಮಯ್ಯ.—ಈ ಹಿಂದೆ ಒಂದು ಸಲ ಸರ್ಕಾರದವರು ಯಾರುಯಾರು ತೆಗೆದು ಕೊಂಡು ಸಾಲವನ್ನು ಸಂಪೂರ್ಣವಾಗಿ ತೀರಿಸುತ್ತಾರೋ ಮತ್ತು ಬಡ್ಡಿಯಲ್ಲಿ ೫೦ ಪರ್ಸೆಂಟ್ ಹಣವನ್ನು ಯಾರು ಕಟ್ಟುತ್ತಾರೋ ಅಂತಹವರಿಗೆ ೫೦ ಪರ್ಸೆಂಟ್‌ವರೆಗೆ ಸಬ್ಸಿಡಿ ಕೊಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡರು. ಇದರ ಒಂದು ಪ್ರಯೋಜನವನ್ನು ಅನೇಕ ಜನ ಪಡೆದುಕೊಂಡರು. ಈಗ ಸಾಲ ತೀರಿಸಲು ಸಮಯವನ್ನು ವಿಸ್ತರಿಸಬೇಕೆಂದು ಕೇಳಿದ್ದಾರೆ. ಇದರ ಒಂದೂ ಸಾಧ್ಯಸಾಧ್ಯತೆಯನ್ನು ನೋಡಿಕೊಂಡು ಒಂದು ತೀರ್ಮಾನ ಕೈಕೊಳ್ಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಮನವಿ ಏನೆಂದರೆ, ಈ ಒಂದು ಪ್ರಶ್ನೆ ೧೦ ನಿಮಿಷಗಳ ಕಾಲದವರೆಗೆ ಸಮಯ ತೆಗೆದುಕೊಂಡಿದೆ. ಮಾನ್ಯ ಮಂತ್ರಿಗಳು ೭ ನಿಮಿಷಗಳ ಕಾಲ ಉತ್ತರವನ್ನು ಓದಿದರು, ಆದರೆ ನಿಯಮ ೪೬ರಲ್ಲಿ ''ಪ್ರಶ್ನೆಯು ಸಾಮಾನ್ಯವಾಗಿ ೧೫೦ ಪದಗಳನ್ನು ಮೀರತಕ್ಕದ್ದಲ್ಲ'' ಎಂದು ಹೇಳಿದೆ. ಈ ಕಾರಣದಿಂದ ಈ ಪ್ರಶ್ನೆಗೆ ಉತ್ತರವನ್ನು ಲಿಖಿತ ಮೂಲಕವಾಗಿ ಕೊಡಬಹುದಾಗಿತ್ತು. ನಂತರ ಮಾನ್ಯ ಸದಸ್ಯರು ಬೇಕಾದರೆ ಆದರ ಮೇಲೆ ಉಪ ಪ್ರಶ್ನೆಗಳನ್ನು ಕೇಳಿದರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವ ಉದ್ದೇಶ ಸಫಲವಾಗುತ್ತದೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸುವ ಹಾಗೂ ಅವುಗಳಿಗೆ ಧನ ಸಹಾಯವನ್ನು ಒದಗಿಸುವ ಬಗ್ಗೆ

೧೫೫. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿವೆ ?

ಆ) ಸಣ್ಣ ಕೈಗಾರಿಕೆಗಳಿಗೆ ಧನ ಸಹಾಯ ಮಾಡುವ ಹಣ ಎಷ್ಟು ?

ಇ) ತರೀಕೆರೆ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ಮತ್ತು ಯಾವ ಯಾವ ಸ್ಥಳದಲ್ಲಿ ಪ್ರಾರಂಭಿಸಬೇಕೆಂದು ಉದ್ದೇಶಿಸಿದ್ದಾರೆ ?

ಶ್ರೀ ಆರ್.ವಿ. ದೇಶಪಾಂಡೆ (ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು).—

ಅ) ೧೮೯೧.

ಆ) ಸಣ್ಣ ಕೈಗಾರಿಕಾ ಘಟಕಗಳಿಗೆ ಒದಗಿಸಿರುವ ನಾನಾ ವಿಧದ ಧನಸಹಾಯದ ವಿವರ ಕೆಳಗಿನಂತಿದೆ.

೧	೧೯೮೨ರಿಂದ ಇಲ್ಲಿಯವರೆಗೆ ೬೪ ಘಟಕಗಳಿಗೆ ಕೊಟ್ಟಿರುವ ಸಬ್ಸಿಡಿ ಹಣ	ರೂ. ೯,೩೬,೯೨೪-೦೦
೨	೧೯೮೪ರಿಂದ ಇಲ್ಲಿಯವರೆಗೆ ೭ ಘಟಕಗಳಿಗೆ ಕೊಟ್ಟಿರುವ ಅಭಿವೃದ್ಧಿ ಸಾಲ	ರೂ. ೩,೩೧,೫೦೦-೦೦
೩	೧೯೮೪ರಿಂದ ಇಲ್ಲಿಯವರೆಗೆ ೧೭ ಘಟಕಗಳಿಗೆ ಕೊಟ್ಟಿರುವ ಹಣ	ರೂ. ೨,೪೫,೬೦೦-೦೦

ಇ) ಇಲ್ಲ, ಉದ್ಭವಿಸುವುದಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ.—ನಮ್ಮ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ದೊಡ್ಡ ಕೈಗಾರಿಕೆಗಳಾಗಲೀ ಅಥವಾ ಸಣ್ಣ ಕೈಗಾರಿಕೆಗಳಾಗಲೀ ಬೆಳೆಯಲು ನಮ್ಮ ಸರ್ಕಾರದವರು ಸಾಕಷ್ಟು ಪ್ರೋತ್ಸಾಹ ಕೊಡುತ್ತಿಲ್ಲ. ಇದಕ್ಕೆ ಉದಾಹರಣೆ ಎಂದರೆ, ತರೀಕೆರೆ ತಾಲ್ಲೂಕ್‌ನಲ್ಲಿ ಕೈಗಾರಿಕೆ ಸ್ಥಾಪನೆ ಮಾಡಲು